**ಸಾಕ್ಷಿಗೆ ದಿನಾಂಕ 23.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಂ ಎನ್ ಎನ್ ವಿ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ ವೈದ್ಯ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿದಾರರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 13 | ಕೇಸ್ ಶೀಟ್ |
| ನಿ.ಪಿ 14 | ಎಂ ಎಲ್ ಸಿ ಎಕ್ಸ್ ಟ್ರಾಕ್ಟ್ ನ ದೃಢೀಕೃತ ಪ್ರತಿ |

**ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ**

1. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ದಿಃ10.06.2025 ರಂದು ಅರ್ಜಿದಾರರನ್ನು ಪರೀಕ್ಷಿಸಿ ದೈಹಿಕ ಅಂಗನ್ಯೂತನೆಯನ್ನು ನಿರ್ಧರಿಸಿರುತ್ತೇನೆ. ದಿಃ10.06.2025 ರಂದು ಅರ್ಜಿದಾರರಿಗೆ ತೆಗೆಸಲಾದ ಎಕ್ಸ್-ರೇಯನ್ನು ಹಾಜರುಪಡಿಸುತ್ತೇನೆ. ನಾನು ಅರ್ಜಿದಾರರಿಗೆ ಸಂಬಂಧಿಸಿದ ಎಕ್ಸ್-ರೇಯನ್ನು ತೆಗೆಸದೆ ಇರುವ ಕಾರಣ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ದಿಃ10.06.2025 ರಂದು ಆಸ್ಪತ್ರೆಗೆ ಬಂದಿದ್ದರು ಎಂದು ತೋರಿಸಲು ದಾಖಲೆ ಇರುವುದಿಲ್ಲ, ಅರ್ಜಿದಾರರ ಬಳಿ ಇರುತ್ತವೆ. ಅರ್ಜಿದಾರರ ಸಂಪೂರ್ಣ ದೇಹಕ್ಕೆ ಅಂಗನ್ಯೂನತೆಯನ್ನು ನಿರ್ಧರಿಸಿರುವುದಿಲ್ಲ ಎಂದರೆ ನಿಗಧಿತ ಅಂಗಕ್ಕೆ ನೀಡಲಾದ 1/3 ರಷ್ಟನ್ನು ಸಂಪೂರ್ಣ ದೇಹಕ್ಕೆ ಅಳವಡಿಸಿಕೊಳ್ಳಬಹುದು. ನಾನು ಇತ್ತೀಚಿಗೆ ಅರ್ಜಿದಾರರನ್ನು ಪರೀಕ್ಷಿಸದೇ ಇರುವ ಕಾರಣ ಅರ್ಜಿದಾರರಿಗೆ ನಿಖರವಾದ ಅಂಗನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ದೇಹದ ಕೆಳಭಾಗಕ್ಕೆ ಶೇ.30 ರಷ್ಟು ಅಂಗನ್ಯೂನತೆ ಇರದೇ ಇದ್ದರೂ ಸಹ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**